ತಿಂದೆ. ಯಾರದೋ ಮನೆಯಲ್ಲಿ ಇನ್ನಷ್ಟು ಬೇಡಿದೆ. ಊಟ ಹಾಕಿದರು. ಅಲ್ಲಿದ್ದವೇ ಹೇಳಿದರು 'ಅಲ್ಲಿ ಇಲ್ಲಿ ಯಾಕೆ ಬೇಡುತ್ತೀಯಾ, ಹೋಗು ಅಲ್ಲಿ ಅಡಬಳ್ಳಿ ಹೆಗ್ಡೇರ ಮನೆಗೆ. ಅಲ್ಲಿ ದಿನವೂ ಉಂಬಲೇ ಸಿಗತ್ತು' ಎಂದು ದಾರಿ ತೋರಿಸಿದರು.

ಅವರು ಬರಿಯ ದಾರಿ ತೋರಿಸಿದಲ್ಲ. ನನ್ನ ಬದುಕಿನ ದಾರಿದೀಪವಾದರು.

* * *

ಅಡಬಳ್ಳಿ ಹೆಗ್ಡೇರು ಇಡೀ ಮೂರೂರು ಸೀಮೆಯಲ್ಲಿ ಹೆಸರುವಾಸಿ ಮನೆತನ. ಹೆಗ್ಡೇರು ದರ್ಬಾರು ಎಂದರೆ ಒಂದು ಸಣ್ಣ ಮೈಸೂರು ಮಹಾರಾಜರ ದರ್ಬಾರು ಥರಾನೇ. ಅವರ ಶಿಸ್ತು ಅಂದ್ರೆ ಶಿಸ್ತು. ಮತ್ತೆ ಅರಮನೆಯಂಥ ಮೂರು ಬಾವಂತಿಯ ಮನೆಯ ಮಹಡಿಯ ಮೇಲೆ ಅವರಿರುವುದು. ಅಲ್ಲಿಯೇ ಸ್ನಾನ, ಎಲ್ಲಾ. ಅವರು ಆಕಾಲದಲ್ಲಿ ನಾಲ್ಕು ಸೀಮೆಯಲ್ಲಿ ಗೇಣಿ ಜಮೀನು ಹೊಂದಿದವರು. ಅವರಷ್ಟು ಭೂಕಂದಾಯ ನಾಲ್ಕು ತಾಲ್ಲೂಕಿನಲ್ಲಿ ಯಾರೂ ಇರಲಿಲ್ಲ. ಇದನ್ನು ಮನಗಂಡು ಬ್ರಿಟಿಷ್‌ರು ಅವರನ್ನು ಜ್ಯೂರಿ ಕೌನ್ಸಿಲ್ ಅಂತ ಅವರನ್ನು ನೇಮಕ ಮಾಡಿದ್ದಾರೆ.

ನ್ಯಾಯ ಪಂಚಾಯತ್ ಮಾಡುವ ಅಧಿಕಾರ ಕೊಟ್ಟಿದ್ದರು. ಭರ್ಜರಿ ಮೀಸೆ, ದಢೂತಿ ಆಳು. ಕಾಲು ಬಿದ್ದು ಮಲಗಿರುವ ಧನಲಕ್ಷ್ಮಿ. ಮೂರು ತಲೆಮಾರು ಕುಳಿತು ತಿಂದರೂ ಮುಗಿಯದ ಆಸ್ತಿ, ಪಾಸ್ತಿ.

ಸಾಕಲ್ಲ— ದರ್ಬಾರ್ ಮಾಡಲು.

ಆ ಕಾಲ ಹಾಗಿತ್ತು.

ಗೇಣಿಯಿಂದ ಬಂದ ಭತ್ತ ಪಣತ ತುಂಬುತಿತ್ತು. ಅಡುಗೆ ಮನೆಯಲ್ಲಿ ನಿರಂತರ ಚೆರಿಗೆ ಅನ್ನ ಬೇಯುತ್ತಿತ್ತು, ಜನ ಜಂಗುಳಿ ನಿರಂತರವಾಗಿತ್ತು.

ಮೂರು ಸಂದರ್ಭಗಳಲ್ಲಿ ಮಾತ್ರ ಹೆಗ್ಡೇರು ಮಹಡಿ ಕೆಳಗಡೆ ಇಳಿದು ಬರುತ್ತಿದ್ದರು. ಆಗೆಲ್ಲಾ ಅವರು ಮನೆ ಎಲ್ಲಾ ಓಡಾಡಿ, ಅಂಗಳದಲ್ಲೂ ತಿರುಗಾಡುತ್ತಿದ್ದರು. ಅವರ ಪಾದಾರವಿಂದಗಳು ಪುಣ್ಯ ಭೂಮಿಯನ್ನು ಸ್ಪರ್ಶಿಸುತ್ತಿದ್ದವು. ಬಂದ ಜನ ಎಲ್ಲಾ ಭಯ ಮತ್ತು ಭಕ್ತಿಯಿಂದ ನಡುಗಿ ನಿಂತು ಕೊಳ್ಳುತ್ತಿದ್ದುದು ಆವಾಗಲೇ...

ಅದು ಯಾವಾಗ ಅಂದ್ರೆ, ಒಂದು ಅಪ್ಪನ ತಿಥಿ, ಇನ್ನೊಂದು ಅಮ್ಮನ ತಿಥಿ, ಮತ್ತೊಂದು ನವರಾತ್ರಿಯ ಒಂಬತ್ತು ದಿನಗಳು.

ನಾನು ಬೇಕಾಬಿಟ್ಟಿಯಾಗಿ ಘಟ್ಟದ ಕೆಳಗಿನಿಂದ ಬಂದಾಗ ಅವರ ಮನೆಯಲ್ಲಿ ನವರಾತ್ರಿ ಆರಂಭವಾಗಿ ಎರಡನೇ ದಿನ...

ನವರಾತ್ರಿ ಉತ್ಸವ ಎಂದರೆ...

ನವರಾತ್ರಿಗೆ ಎಂಟು ದಿನಗಳ ಮುಂಚೆಯೇ ಜನ ಸಿದ್ಧತೆಗೆ ಸೇರಲು ಶುರು. ಎರಡು ದಿನಗಳ ಮುಂಚೆಯಿಂದ ಊರಿನವರಿಗೆಲ್ಲಾ ಊಟ, ಕಾಫಿ, ತಿಂಡಿಗೆ. ನವರಾತ್ರಿ ಉತ್ಸವ ಎಂದರೆ....

ಚಪ್ಪರ, ತೋರಣ, ಗ್ಯಾಸ್ ಲೈಟು, ಸಂತೆಯಪ್ಪ ಸಂತೆ. ಓಲಗದವರು, ಭಂಗಿ ಮಾಡೋರು, ಇಸ್ಪೀಟು ಆಡೋರು, ಆಟ ಕುಣಿಯೋರು, ಕುಣಿಯುವ ಹೆಂಗಸರು, ಹಾಡೋ ಹೆಂಗಸರು, ಸೋಮಾರಿಗಳು, ದಗಲ್ ಬಾಜಿಗಳು, ಪಟೇಲರು, ಶಾನುಭೋಗರು, ಮೂರು ಸೀಮೆ ವೈದಿಕರು, ಕಳ್ಳರು, ಸುಳ್ಳರು, ನೆಂಟರು, ಇಷ್ಟರು,ಗೋಕರ್ಣದ ಭಟ್ಟರುಗಳು... ಯ್ಯಾಮ್, ಒಬ್ಬರಾ, ಇಬ್ಬರಾ... ಒಟ್ಟಾರೆ ಎಲ್ಲಾ ಥರದ ಜನರ ಜಾತ್ರೆ...

ದರಬೇಶಿಯಾಗಿ ಘಟ್ಟದ ಕೆಳಗಿನಿಂದ ಬಂದ ನನಗೆ ಇದೊಂದು ಅಮರಾವತಿ ಅಂತೆ ಕಂಡಿತು.

ನಾನು ಹೆಗ್ಡೇರ ಚಪ್ಪರದೊಳಕ್ಕೆ ಹೊಕ್ಕೆ.

'ಬಾಯಾರಿಕೆ, ಬಾಯಾರಿಕೆ' ಅಂತ ಜನ ಕೂಗುತ್ತಿದ್ದರು. ಅಲ್ಲಿ ಹೋಗಿ ಬಾಯಾರಿಕೆ ಕುಡಿದೆ. 'ಊಟಕ್ಕೆ ಹೋಗಿ' ಅಂತ ಒಂದು ಕಡೆ ತೋರಿಸಿದರು. 'ನಾನು ಆ ಕಡೆ— ಈ ಕಡೆ ನೋಡಿದಾಗ 'ಏನು ಹೊಸಬರಾ. ಹೆಸರು' ಎಂದರು. ನಾನು ಸ್ವಲ್ಪ ಹುಷಾರಾಗಿ ಹಿಂದಿನ ಅನುಭವದಿಂದ 'ವಿಷ್ಣು ಹೆಬ್ಬಾರ್' ಎಂದು ಬಿಟ್ಟೆ. ಅದೇ ಜೀವನದ ತಿರುವು.

'ಹೆಬ್ಬಾರ್ ಅಂದ್ರೆ. ಈ ಕಡೆ ಮನೆಯೊಳಕ್ಕೆ ಹೋಗಿ— ಏಯ್, ಅವರಿಗೆ ಒಂದು ಮಡಿ ಪಂಚೆ ಟವಲ್ಲು ಕೊಡೋ' ಎಂದರು. ನಾನು ಒಳಕ್ಕೆ ಹೋಗಿ ಅವರು ಕೊಟ್ಟ ಪಂಚೆ ಉಟ್ಟು, ಟವಲ್ ಹೊದ್ದು ಒಳಕ್ಕೆ ಹೋದೆ. ಆದರೆ ಒಳಗೆ ಅಳುಕಿತ್ತು. ಯಾಕೆಂದರೆ ಮೈಮೇಲೆ ಜನಿವಾರ ಇರಲಿಲ್ಲ. ಅದಕ್ಕಾಗಿ ಏನು ಮಾಡೋದು ಗೊತ್ತಾಗದೆ ಬೆವರಿದೆ. ಅಷ್ಟು ಹೊತ್ತಿಗೆ ಸರಿಯಾಗಿ ಒಬ್ಬ ಮುದುಕರು ನನ್ನನ್ನು ನೋಡಿ 'ಏನು ಇಲ್ಲೇ ನಿಂತಿದ್ದೀರಲ್ಲ, ಊಟಕ್ಕೆ ಹೋಗಿ' ಎಂದರು. ನಾನು ನಿಧಾನವಾಗಿ 'ಜನಿವಾರ ಹರಿದು ಹೋಯಿತು' ಎಂದೆ ಅವರು ಓಹ್! ಹೌದಾ. 'ಇಲ್ಲಿ ಬನ್ನಿ' ಎಂದು ದೇವರ ಮನೆ ಹತ್ತಿರ ಕರೆದು ಅಲ್ಲಿನ ಒಂದು ಡಬ್ಬಿ ತೆಗೆದು ಜನಿವಾರ ಕೊಟ್ಟರು.

ನಾನು ವಿಷ್ಣು ಹೆಬ್ಬಾರ್ ಎಂದು ಖಾಯಂ ಆದೆ.

ಆಮೇಲೆ ಒಳ ನಡೆದೆ. ಭೋಜನದ ಚಪ್ಪರಕ್ಕೆ— ಸುಗ್ರಾಸ ಭೋಜನ. ಊಟದ ನಂತರ ರಾತ್ರಿಯಾಗುತ್ತಾ ಬಂದಂತೆ ಹೆಗ್ಡೇರ ನವರಾತ್ರಿ ಉತ್ಸವಕ್ಕೆ ರಂಗೋರಂಗು. ಊಟ ಒಂದು ಕಡೆ, ಇನ್ನೊಂದು ಕಡೆ ಹಾಡುಗಾರ ಹೆಂಗಸರು, ಮತ್ತೊಂದು ಕಡೆ ನೃತ್ಯ ಮಾಡುವ ಹೆಂಗಸರು, ನೃತ್ಯ ಮಾಡೋಕೆ ಭಟ್ಕಳದಿಂದ ಬಂದವರು, ಅವರ ಹಾವಭಾವ, ಉಡುಪು, ವಯ್ಯಾರ. ಮಗದೊಂದು ಕಡೆ ಭಂಗಿ ಸೊಪ್ಪನ್ನು ಅರೆದು ಕೊಡುವ ಪಾನಕದ ಸಿದ್ಧತೆ.... ಇನ್ನೊಂದು ಕಡೆ ಓಲಗ, ಇದರ ಮಧ್ಯಭಾಗದಲ್ಲಿ ವಿರಾಜಿತಮಾನರಾದ ಹೆಗ್ಡೆ.

ಆಹಾ! ನೋಡುವುದಕ್ಕೆ ಅಷ್ಟು ಚೆಂದ.

ಇವೆಲ್ಲಾ ಮುಗಿಯಲು ಮಧ್ಯರಾತ್ರಿ ಕಳೆಯಬೇಕು.

'ಆಯಿತಲ್ಲಾ, ಮುಗಿಸಿ' ಎಂದು ಭಂಗಿ ಸಮಾ ಕುಡಿದ ಹೆಗ್ಡೇರು ಏಳುವಾಗ ಎಲ್ಲರೂ 'ಮುಗಿಸಿ, ಮುಗಿಸಿ ಮತ್ತೆ ನಾಳೆ ಇದೆಯೆಲ್ಲಾ' ಎಂದು ದಡಬಡನೆ ಆದಿನದ ರಾತ್ರಿ ಮುಗಿಯುತ್ತಿತ್ತು.

ಇದೆಲ್ಲಾ ಗೊತ್ತಿದ್ದ ಊರ ಹೆಂಗಸರು, ಇನ್ನೂ ಸ್ವಲ್ಪ ಮಾನಮರ್ಯಾದೆ ಇರೋರು ಬೇಗ ಬೇಗನೆ ಬಂದು ಊಟದ ಶಾಸ್ತ್ರ ಮಾಡಿ ಓಡಿಯೇ ಬಿಡೋರು ಮನೆಗೆ. ಇದು ರಸಿಕತನವೋ, ಮೂರ್ಖತನವೋ, ಆಡಿ ಮುಠ್ಠಾಳತನವೋ, ಅಹಂಕಾರವೋ ತಮ್ಮನ್ನು ಪುನಃ ಪುನಃ ಸಮಾಜದಲ್ಲಿ ಸ್ಥಾಪಿಸಿಕೊಳ್ಳುವ ಹುನ್ನಾರವೋ.... ಯಾರು ಏನು ಬೇಕಾದರೂ ತಿಳಿದು ಕೊಳ್ಳಲಿ—

ಮುಂಡೆ ಮದುವೇಲಿ ಉಂಡವನೆ ಜಾಣ... ಆ ಜಾಣರಲ್ಲಿ ನಾನು ಒಬ್ಬನಾಗಿದ್ದೆ.

* * *

ನಾನು ಬರೀ ಜಾಣನಲ್ಲ— ಘಟ್ಟದ ಕೆಳಗಿನಿಂದ ಬಂದ ಜಾಣ. ಸೂಕ್ಷ್ಮಗ್ರಾಹಿಯಾದ ನಾನು ಇಲ್ಲೇ ನನ್ನ ಜೀವನದ ಸೆಲೆ ಇರುವುದು ಎಂಬುದನ್ನು ಗ್ರಹಿಸಿದೆ. ಹೀಗಾಗಿ ವಿನಯಾತಿವಿನಯನಾದೆ. ಇದರ ಒಟ್ಟಾರೆ ಪರಿಣಾಮ ಎರಡು ದಿನಗಳು ಕಳೆಯುವುದರಲ್ಲಿ ನಾನು ಹೆಗ್ಡೆಗೆ ಭಂಗಿ ಕುಡಿಸುವಷ್ಟು ಹತ್ತಿರವಾದೆ. ಅಷ್ಟೆ ಅಲ್ಲ ಹೆಗ್ಡೆ ಅಮಲಿನಲ್ಲಿ ಬಿದ್ದಾಗ, ನಿಲ್ಲಲಾಗದೇ ಓಲಾಡುತ್ತಿರುವಾಗ ಮಹಡಿಗೆ ಒಬ್ಬನೇ ಹೊತ್ತುಕೊಂಡು ಹೋಗಿ ಬಿಡುವಷ್ಟು ಸಮೀಪಕ್ಕೆ ಸರಿದೆ. ಖಾಸಗಿ ವಲಯದಲ್ಲಿ 'ನಾನೇ' ಆದೆ. ಅವರ ಬೇಕು ಬೇಡಗಳನ್ನು ನನ್ನ ಮೂಲಕವೇ ರವಾನೆಯಾಗ ತೊಡಗಿತು.

* * *

## ಸ್ಪರ್ಶ

ಅವಳ ತುಟಿಗೆ
ನಾ ಉಸಿರಾಗುವೆ
ಕೊಳಲಾಗಿ..

## ನೆನಪು

ಉರುಳಿ ಹೋದ
ಕನಸಿನ ಕಟ್ಟಡಗಳ
ಅವಶೇಷಗಳು..
ನೆನಪಿನ
ಒಡಾವಣೆಯ ತುಂಬಾ..

★ ರಾಂಚಂದ್ರ ಕೊಪ್ಪಲು



ಈಶ್ವರ